**ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಹಳ್ಳಳ್ಳಿ ಗ್ರಾಮಕ್ಕೆ ನೀರಿನ ಸರಬರಾಜು**

954 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪೂರ ತಾಲ್ಲೂಕಿನ ಹಳ್ಳಳ್ಳಿ ಗ್ರಾಮದಲ್ಲಿ ನೀರು ಸರಬರಾಜು ಯೋಜನೆ ಗದ್ದಿಗಿ ತಾಂಡ ಹತ್ತಿರದಿಂದ ಕೈಗೊಂಡು 3-4 ವರ್ಷಗಳಿಂದ ಸ್ಥಗಿತಕೊಂಡು ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಯೋಜನೆಯಡಿಯಲ್ಲಿ 1996-97, 1997-98, 1998-99, 1999-2000 ಸಾಲಿನಲ್ಲಿ ಖರ್ಚಾಗಿರುವ ಹಣವೆಷ್ಟು?*

ಇ) *ಪೈಪ್ ಲೈನ್ ಮಾಡಲಾಗಿದೆಯೇ? ಗ್ರಾಮದಲ್ಲಿ ನಳದ ಕೊಳವೆಗಳನ್ನು ಕೂಡಿಸಲಾಗಿದೆಯೇ?*

ಈ) *ಈ ಎಲ್ಲಾ ಕಾಮಗಾರಿಗಳಿಗಾಗಿ ಖರ್ಚಾಗಿರುವ ಹಣವೆಷ್ಟು?*

ಉ) *ಈ ಯೋಜನೆ ಪೂರ್ತಿ ಮಾಡಿ ಆ ಗ್ರಾಮದ ನಾಗರೀಕರಿಗೆ ಕುಡಿಯುವ ನೀರಿನ ಸರಬರಾಜು ಮಾಡುವುದು ಯಾವಾಗ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬಂದಿದೆ.

ಆ) ವರ್ಷವಾರು ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

| *ವರ್ಷ* | *ವೆಚ್ಚ (ರೂ. ಲಕ್ಷಗಳಲ್ಲಿ)* |
|---|---|
| 1996-97 | 0.92 |
| 1997-98 | 3.10 |
| 1998-99 | 2.39 |
| 99-2000 (ಫೆಬ್ರವರಿ 2000ದವರೆಗೆ) | 1.80 |

ಇ) ಪೈಪ್ ಲೈನ್ ಕೆಲಸ ಪ್ರಗತಿಯಲ್ಲಿದೆ ನಳದ ಕೊಳವೆಗಳನ್ನು ಕೂಡಿಸಿರುವುದಿಲ್ಲ.

ಈ) ರೂ. 11.23 ಲಕ್ಷಗಳು.

ಉ) ಈ ಯೋಜನೆಯನ್ನು ಏಪ್ರಿಲ್ 2000ದ ಅಂತ್ಯದೊಳಗಾಗಿ ಪೂರ್ಣಗೊಳಿಸಿ ಗ್ರಾಮಸ್ಥರಿಗೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.